ಕಾರ್ಯ ಪೂರ್ಣಗೊಳಿಸುವುದು

1027 (1179) ಶ್ರೀ ಹೆಚ್.ಸಿ. ಬಸವರಾಜು (ಪಿರಿಯಪಟ್ಟಣ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೆ ಆರ್. ನಗರ ತಾಲ್ಲೂಕು ಚುಂಚನಕಟ್ಟೆ ಹೋಬಳಿಗೆ ಸೇರಿದ ಹಸನೋಗೆ ಗ್ರಾಮದ ಪಕ್ಕದಲ್ಲಿ ಹರಿಯುವ ಕಾವೇರಿ ನದಿಗೆ ಅಡ್ಡಲಾಗಿ ಲೋಕೋಪಯೋಗಿ ಇಲಾಖಾವತಿಯಿಂದ ಸೇತುವೆ ನಿರ್ಮಾಣ ಕಾರ್ಯಕೈಗೊಂಡು ಅರ್ಧಕ್ಕೆ ನಿಂತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಕಾಮಗಾರಿಗೆ ಸರ್ಕಾರ ನಿಗಧಿಪಡಿಸಿದ ಹಣ ಎಷ್ಟು? ಯಾವ ವರ್ಷದಲ್ಲಿ ಸದರಿ ಯೋಜನೆ ಅಳವಡಿಸಲಾಯಿತು? ಅರ್ಧಕ್ಕೆ ನಿಲ್ಲಿಸಲು ಕಾರಣಗಳೇನು?

ಇ) ಈ ಸೇತುವೆ ನಿರ್ಮಾಣ ಕಾರ್ಯವನ್ನು ಪುನರ್ ಪ್ರಾರಂಭಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ?

ಈ) ಹಾಗಿದ್ದಲ್ಲಿ ಸದರಿ ಯೋಜನೆ ಕಾಮಗಾರಿಯನ್ನು ಎಂದಿನಿಂದ ಪುನರ್ ಪ್ರಾರಂಭಿಸಲಾಗುವುದು?

ಶ್ರೀ ಧರಮ್ ಸಿಂಗ್ (ಲೋಕೋಪಯೋಗಿ ಸಚಿವರು) :

ಅ) ಸದರಿ ಸೇತುವೆ ನಿರ್ಮಾಣದ ಕಾರ್ಯ ಅರ್ಧಕ್ಕೆ ನಿಂತಿರುವುದು ಸರ್ಕಾರದ ಗಮನಕ್ಕೆ ಬಂದಿದೆ

ಆ) ಈ ಕಾಮಗಾರಿಗಾಗಿ 1976-77ನೇ ಸಾಲಿನಲ್ಲಿ ರೂ. 21.86 ಲಕ್ಷಗಳಿಗೆ ಮತ್ತು 1983-84ನೇ ಸಾಲಿನಲ್ಲಿ ರೂ.60.00 ಲಕ್ಷಗಳ ಅಂದಾಜಿಗೆ ಮಂಜೂರಾತಿ ನೀಡಲಾಗಿತ್ತು. ಸದರಿ ಯೋಜನೆಯನ್ನು 76-77ನೇ ಸಾಲಿನಲ್ಲಿ ಅಳವಡಿಸಲಾಯಿತು. ಅನುದಾನಗಳ ಕೊರತೆಯಿಂದ ಹಾಗೂ ಗುತ್ತಿಗೆದಾರರು ಕಾಮಗಾರಿಯನ್ನು ಸ್ಥಗಿತಗೊಳಿಸಿದ್ದರಿಂದ ಕಾಮಗಾರಿಯು ಅರ್ಧಕ್ಕೆ ನಿಂತಿರುತ್ತದೆ.

ಇ) ಈ ಸೇತುವೆ ನಿರ್ಮಾಣ ಕಾರ್ಯವನ್ನು ಪುನರ್ ಪ್ರಾರಂಭಿಸುವ ಉದ್ದೇಶ ಸರ್ಕಾರಕ್ಕೆ ಇರುತ್ತದೆ.

ಈ) ಅನುದಾನದ ಲಭ್ಯತೆಯ ಮೇರೆಗೆ ಕಾಮಗಾರಿಯನ್ನು ತೆಗೆದುಕೊಳ್ಳಲಾಗುವುದು.

ಸೇಡಂ ತಾಲ್ಲೂಕಿನ ಹಾಬಾಳ್ (ಟಿ) ಗ್ರಾಮದಲ್ಲಿ ಡಾಳ್ಮಾ ಯೋಜನೆಯಡಿ ತಗ್ಗುಗಳು ತೋಡಿ ಸಸಿಗಳನ್ನು ನೆಡದಿರುವುದು

1028 (1184) ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ಹಾಬಾಳ್(ಟಿ) ಗ್ರಾಮದಲ್ಲಿ ಡಾಕ್ಟ್ರಾ ಯೋಜನೆಯಡಿಯಲ್ಲಿ ಮೂರು ಸಾವಿರ ಕಾಡು ಮರ ಮತ್ತು ಎರಡು ಸಾವಿರ ಫಲ ಕೊಡುವ ಮರಗಳಿಗಾಗಿ ಗುಂಡಿ ತೋಡಿ ಈವರೆಗೆ ಸಸಿಗಳನ್ನು ನೆಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಾದಲ್ಲಿ ಗುಂಡಿಗಳನ್ನು ಏಕೆ ತೋಡಲಾಗಿದೆ; ಗುಂಡಿ ತೋಡಲು ಮತ್ತು ಸಸಿಗಳನ್ನು ನೆಡಲು ತಗಲಿರುವ ಖರ್ಚು ಎಷ್ಟು?

ಇ) ಈ ಗುಂಡಿಯಲ್ಲಿ ಸಸಿ ನೆಡದಿದ್ದರೆ ಇಲಾಖೆಯ ಖರ್ಚು ಬರಿಸಿದವರ ಮೇಲೆ ಯಾವ ಕ್ರಮ ತೆಗೆದುಕೊಂಡಿದೆ?

ಶ್ರೀ ಕೆ.ಹೆಚ್. ರಂಗನಾಥ್ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು) :

ಅ) ಡಾಕ್ಟ್ರಾ ಯೋಜನೆಯಲ್ಲಿ ಈ ಕೆಲಸವನ್ನು ತೆಗೆದುಕೊಂಡಿಲ್ಲ

ಆ) ಉದ್ಭವಿಸುವುದಿಲ್ಲ

ಇ) ಉದ್ಭವಿಸುವುದಿಲ್ಲ

ಬೆಂಗಳೂರು-ಮೈಸೂರು ಎಕ್ಸ್‌ಪ್ರೆಸ್ ಹೈವೇ ಕುರಿತು

1029 (1148) ಶ್ರೀ ಎನ್.ಚಲುವರಾಯ ಸ್ವಾಮಿ (ನಾಗಮಂಗಲ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು-ಮೈಸೂರು ಎಕ್ಸ್‌ಪ್ರೆಸ್ ಹೈವೇಯನ್ನು ಅನುಷ್ಠಾನಗೊಳಿಸಲು ಎಷ್ಟು ಎಕರೆ ಜಮೀನನ್ನು ಭೂಸ್ವಾಧೀನ ಪಡಿಸಿಕೊಳ್ಳಲು ಉದ್ದೇಶಿಸಲಾಗಿದೆ? ಮತ್ತು ಉಪ ನಗರಗಳನ್ನು ಸ್ಥಾಪಿಸಲು ಎಷ್ಟು ಎಕರೆ ಜಮೀನನ್ನು ಭೂಸ್ವಾಧೀನ ಪಡಿಸಿಕೊಳ್ಳಲು ಉದ್ದೇಶಿಸಲಾಗಿದೆ?

ಆ) ಬೆಂಗಳೂರು-ಮೈಸೂರು ಎಕ್ಸ್‌ಪ್ರೆಸ್ ಹೈವೇ ಕಾಮಗಾರಿಯನ್ನು ಯಾವುದಾದರೂ ಕಂಪನಿಗೆ ನಿರ್ವಹಿಸಲು ವಹಿಸಿದೆಯೆ? ವಿವರಗಳನ್ನು ಒದಗಿಸುವುದು.

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :

ಅ) ಈ ಯೋಜನೆಯನ್ನು ಅನುಷ್ಠಾನಗೊಳಿಸಲು ಒಟ್ಟಾರೆ 20,193 ಎಕರೆ ಜಮೀನು ಬೇಕಾಗುವುದು. ಇದರಲ್ಲಿ 6,999 ಎಕರೆ ಜಮೀನನ್ನು ವೇಗದ ರಸ್ತೆ ಮತ್ತು ಅದಕ್ಕೆ ತತ್ಸಂಬಂಧ ರಸ್ತೆಗಳನ್ನು ನಿರ್ಮಿಸಲೂ ಹಾಗೂ ಉಳಿಕೆ 13,194 ಎಕರೆ ಜಮೀನನ್ನು ಯೋಜನೆಯ ಅಡಿಯಲ್ಲಿ ಬರುವ 5 ಉಪನಗರಗಳನ್ನು ಸ್ಥಾಪಿಸಲು ಅವಶ್ಯಕತೆ ಇರುವುದು.

ಆ) ಬೆಂಗಳೂರು-ಮೈಸೂರು ಎಕ್ಸ್‌ಪ್ರೆಸ್ ಹೈವೇ ಯೋಜನೆಯನ್ನು ಅನುಷ್ಠಾನಗೊಳಿಸಲು ಮೆ॥ ನಂದಿ ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಎಂಟರ್‌ಪ್ರೈಸಸ್ ಲಿಮಿಟೆಡ್ (ನೈಸ್) ಸಂಸ್ಥೆಗೆ ವಹಿಸಲಾಗಿದೆ.